ನಿಮ್ಮೊಡನೆ

# ಜನಸಮೂಹದ ಮಹಾಮೌನ ಏನನ್ನು ಸೂಚಿಸುತ್ತದೆ?

> ಬೆಲೆ ಏರಿಕೆಯಿಂದ ಜನಸಾಮಾನ್ಯರನ್ನು ರಕ್ಷಿಸಲು, ಪ್ರಜೆಗಳ ಹಿತಾಸಕ್ತಿಯ ಹೊಣೆಗಾರಿಕೆಯನ್ನು ಹೊರಲು ಆಡಳಿತ ಪಕ್ಷಗಳು ಸಿದ್ಧವಿಲ್ಲ, ಪ್ರತಿಪಕ್ಷಗಳೂ ಸಿದ್ಧವಿಲ್ಲ. ಇಬ್ಬರಿಗೂ ಬೇಕಾದುದು ಅಧಿಕಾರದ ರಾಜಕಾರಣವೇ ಹೊರತು ಸಮೂಹದ ಹಿತಾಸಕ್ತಿಯಲ್ಲ.

ಸಂಯಮ ಮತ್ತು ಸಾತ್ವಿಕ ಸಿಟ್ಟು ಜನಸಮೂಹದ ಬಹುದೊಡ್ಡ ಶಕ್ತಿ ಹಾಗೂ ಗುಣಗಳು. ಎರಡರ ಸಮತೋಲನ ಹದದಲ್ಲಿದ್ದಾಗ ಸಮಾಜದ ಆರೋಗ್ಯ ಚೆನ್ನಾಗಿರುತ್ತದೆ, ಹದ ತಪ್ಪಿದಾಗ ಸ್ವಾಸ್ಥ್ಯಕ್ಕೆ ಧಕ್ಕೆಯುಂಟಾಗುತ್ತದೆ. ಈ ಸಮತೋಲನದ ಸಮೀಕರಣಕ್ಕೆ ಹತ್ತಾರು ಉದಾಹರಣೆಗಳನ್ನು ಸಮಕಾಲೀನ ವಿದ್ಯಮಾನಗಳಿಂದ ಹೆಕ್ಕಿತೆಗೆಯಬಹುದು. 'ಬೆಲೆ ಏರಿಕೆ' ಅಂಥದ್ದೊಂದು ಉದಾಹರಣೆ.

ಬೆಲೆ ಏರಿಕೆಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಪೈಪೋಟಿಗೆ ಬಿದ್ದಿರುವ ದಿನಗಳಿವು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗೆ ಅಂಕುಶವೇ ಇಲ್ಲದಂತಾಗಿದೆ. ಅಡುಗೆ ಅನಿಲ ದರದ ಕಾವು ಮನೆಗಳಲ್ಲಿ ಕಾಣಿಸಿಕೊಂಡಿದೆ. ದುಬಾರಿಯಾಗಿರುವ ವಿದ್ಯುತ್‌ನಿಂದ ಬೇಸಿಗೆಯ ಧಗೆ ಮತ್ತಷ್ಟು ಹೆಚ್ಚಾಗಿದೆ. ಬೆಲೆ ಏರಿಕೆ ಎನ್ನುವುದು ಒಂದು ಸರಪಳಿ. ಇಂಧನ ದುಬಾರಿಯಾದರೆ ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಹೆಚ್ಚಾಗುತ್ತವೆ. ಹೋಟೆಲ್‌ಗಳಲ್ಲಿನ ಆಹಾರ ದರ ಶೇ. 10ರಷ್ಟು ಹೆಚ್ಚಾಗಿದೆ. ಕೆಲವು ಔಷಧಿಗಳ ಬೆಲೆಯೂ ತುಟ್ಟಿಯಾಗಿದೆ. ಆದರೆ ಜನರ ಗಳಿಕೆಯ ಪ್ರಮಾಣದಲ್ಲಿ ಮಾತ್ರ ಏರಿಕೆಯಾಗಿಲ್ಲ. ಕೊರೊನಾ ಉಂಟುಮಾಡಿದ ಆರ್ಥಿಕ ಹೊಡೆತ ಸುಲಭಕ್ಕೆ ಚೇತರಿಸಿಕೊಳ್ಳುವಂತಹದ್ದಲ್ಲ.

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯ ನೇರ ಬಿಸಿ ತಟ್ಟುವುದು ಸಮಾಜದ ಬಹುದೊಡ್ಡ ಭಾಗವಾದ ಬಡವರಿಗೆ ಹಾಗೂ ಮಧ್ಯಮವರ್ಗದವರಿಗೆ. ಆದರೆ, ಇತ್ತೀಚಿನ ದಿನಗಳಲ್ಲಿ ವಸ್ತುಗಳ ಧಾರಣೆ ಎಷ್ಟು ಮೇಲೇರಿದರೂ ಜನಸಮೂಹದ ಸೈರಣೆ ಮಾತ್ರ ಕಡಿಮೆಯಾಗುತ್ತಿಲ್ಲ. ಜನ ಸಿಟ್ಟಿಗೇಳಲು ಬೆಲೆ ಏರಿಕೆಗಿಂತಲೂ ಮತ್ತೊಂದು ಕಾರಣ ಬೇಕಿಲ್ಲ. ಹಿಂದೆಲ್ಲಾ ಬಸ್ಸು, ವಿದ್ಯುತ್, ಅಡುಗೆ ಅನಿಲದಂಥ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಾದಾಗ ಜನ ಬೀದಿಗಿಳಿದು ಪ್ರತಿಭಟಿಸುತ್ತಿದ್ದರು. ಪ್ರತಿಭಟನೆಗೆ ಮಣಿದು ಸರ್ಕಾರಗಳು ಕೊಂಚ ಬೆಲೆ ಇಳಿಸುವ ಮೂಲಕ ಜನರ ಸಿಟ್ಟನ್ನು ಶಮನಗೊಳಿಸುತ್ತಿದ್ದವು. ಈಗ ಪರಿಸ್ಥಿತಿ ಬದಲಾಗಿದೆ. ಬೆಲೆ ಏರಿಕೆಯನ್ನು ಜನಸಮೂಹ ತಣ್ಣಗೆ ಭರಿಸುತ್ತಿದೆ.

ಜನಸಮೂಹ ಮಾತ್ರವಲ್ಲ, ವಿರೋಧ ಪಕ್ಷಗಳು ಕೂಡ ಬೆಲೆ ಏರಿಕೆಯ ಬಗ್ಗೆ ಬೀದಿಗಿಳಿದು ಹೋರಾಡುವ ಛಲ ತೋರಿಸುತ್ತಿಲ್ಲ. ಬೆಲೆ ಏರಿಕೆಗೆ ಸಂಬಂಧಿಸಿದಂತೆ ರಾಜಕಾರಣಿಗಳ ನಡವಳಿಕೆಗಳು ಜನವಿರೋಧಿಯಾಗಿವೆ. ಆಡಳಿತ ಪಕ್ಷದ ರಾಜಕಾರಣಿಗಳು ಬೆಲೆ ಏರಿಕೆಗೆ ನೀಡುವ ಸಮರ್ಥನೆಗಳು ವಿಚಿತ್ರವಾಗಿವೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಆಗಿದ್ದ ಏರಿಕೆಯನ್ನು ಪ್ರಸ್ತಾಪಿಸಿ ಈಗಿನ ಏರಿಕೆಗಳನ್ನು ಸಮರ್ಥಿಸಿಕೊಳ್ಳುವವರು ನಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ಹೀಗೆ ಸಮರ್ಥಿಸುವ ಜನ ಪ್ರತಿನಿಧಿಗಳಿಗೆ ಸರ್ಕಾರ ಮತ್ತು ಕಾರ್ಪೊರೇಟ್ ಸಂಸ್ಥೆಯ ನಡುವಿನ ವ್ಯತ್ಯಾಸ ತಿಳಿದಂತಿಲ್ಲ. ಅಷ್ಟು ಮಾತ್ರವಲ್ಲ, ತಾವು ಪ್ರತಿನಿಧಿಸುತ್ತಿರುವುದು ಪ್ರಜೆಗಳನ್ನೋ ಅಥವಾ ಕಾರ್ಪೊರೇಟ್ ಸಂಸ್ಥೆಗಳನ್ನೋ ಎನ್ನುವುದರ ಬಗ್ಗೆಯೂ ಕೆಲವರಿಗೆ ಗೊಂದಲವಿದ್ದಂತಿದೆ. ಚುನಾವಣೆ ಸಂದರ್ಭದಲ್ಲಿ ಸ್ಥಿರವಾಗಿರುವ ಬೆಲೆಗಳು, ನಂತರದ ದಿನಗಳಲ್ಲಿ ಲಗಾಮು ಸಡಿಲಿಸಿಕೊಳ್ಳುತ್ತವೆ. ಪ್ರತಿಪಕ್ಷಗಳು ಹೇಳಿಕೆ, ಶಾಸನಸಭೆಗಳಲ್ಲಿ ಕೂಗಾಟಕ್ಕೆ ತಮ್ಮ ಹೊಣೆಗಾರಿಕೆಯನ್ನು ಸೀಮಿತಗೊಳಿಸಿಕೊಂಡಿವೆ. ಪ್ರಜೆಗಳ ಹಿತಾಸಕ್ತಿಯ ಹೊಣೆಗಾರಿಕೆಯನ್ನು ಹೊರಲು ಆಡಳಿತ ಪಕ್ಷವೂ ಸಿದ್ಧವಿಲ್ಲ, ಪ್ರತಿಪಕ್ಷಗಳೂ ಸಿದ್ಧವಿಲ್ಲ. ಇಬ್ಬರಿಗೂ ಬೇಕಾದುದು ಅಧಿಕಾರದ ರಾಜಕಾರಣವೇ ಹೊರತು ಸಮೂಹದ ಹಿತಾಸಕ್ತಿಯಲ್ಲ. ತಮ್ಮ ಸಂಬಳ ಮತ್ತು ಭತ್ಯೆಗಳನ್ನು ಎಗ್ಗಿಲ್ಲದ ಏರಿಸಿಕೊಳ್ಳುವ ಶಾಸಕರು, ಸಂಸದರಿಗೆ ಜನರ ಜೀವನಮಟ್ಟ ಸುಧಾರಿಸುವುದರ ಕುರಿತು ಬಾಯಿಮಾತಿನ ಅನುಕಂಪದಾಚೆಗೆ ಏನನ್ನು ಮಾಡುವುದೂ ಸಾಧ್ಯವಾಗುತ್ತಿಲ್ಲ.

ವಿದ್ಯಾರ್ಥಿ ಸಂಘಟನೆಗಳು ಜನವಿರೋಧಿ ನೀತಿಗಳ ಬಗ್ಗೆ ಬೀದಿಗಿಳಿದು ಪ್ರತಿಭಟಿಸುವ ಶಕ್ತಿಯನ್ನು ಕಳೆದುಕೊಂಡಿರುವುದು ಬಿಕ್ಕಟ್ಟು ಬಿಗಡಾಯಿಸಲು ಮತ್ತೊಂದು ಕಾರಣ. ಈಗಿನ ಸಂಘಟನೆಗಳಿಗೆ ಜನಸಾಮಾನ್ಯರ ಬದುಕಿನ ಸಂಕಷ್ಟಗಳು ಮುಖ್ಯವೆನ್ನಿಸುತ್ತಿಲ್ಲ. ಈ ಬದಲಾವಣೆ ಏನನ್ನು ಸೂಚಿಸುತ್ತಿದೆ? ಜನಸಾಮಾನ್ಯರ ಪ್ರತಿಭಟನೆಯ ಶಕ್ತಿ ಉಡುಗಿಹೋಗಿದೆಯೆ? ಬಡವನ ಕೋಪ ದವಡೆಗೆ ಮೂಲ ಎನ್ನುವ ಅಸಹಾಯಕತೆಯಲ್ಲಿ ಜನಸಮೂಹ ಮೌನವಾಗಿದೆಯೆ?

ಇಂದಿನ ರಾಜಕಾರಣ ಜನಸಾಮಾನ್ಯರ ಗಮನವನ್ನು ಬೇರೆಡೆಗೆ ಸೆಳೆದಿದೆ. ಚುನಾವಣೆಗಳು ಯಾವಾಗ ತೋಳ್ಬಲ, ಜಾತಿಬಲ ಮತ್ತು ಹಣಬಲದ ಅಖಾಡಗಳಾಗಿ ಬದಲಾದವೋ ಧರ್ಮ ಮತ್ತು ರಾಜಕಾರಣದ ನಡುವಿನ ಗೆರೆ ತೆಳುವಾಗುತ್ತಾ ಹೋಯಿತೋ ಆಗಿನಿಂದಲೇ ಜನಸಮೂಹದ ಶಕ್ತಿ ಕೂಡ ದುರ್ಬಲವಾಗುತ್ತಾ ಹೋಗಿದೆ. ಸಾತ್ವಿಕ ಸಿಟ್ಟು ಈಗ ರಟ್ಟೆಗೂ ಬರುತ್ತಿಲ್ಲ, ಸಮೂಹದ ವಿವೇಕವನ್ನೂ ತಾಕುತ್ತಿಲ್ಲ. ಜನರ ಸಿಟ್ಟನ್ನು ಶಮನಗೊಳಿಸುವ ಮದ್ದುಗಳನ್ನು ರಾಜಕಾರಣಿಗಳು ಕಂಡುಕೊಂಡಿದ್ದಾರೆ. ಸಮಾಜದ ಪ್ರತಿರೋಧಕ ಶಕ್ತಿಯನ್ನು ಮರೆಯಿಸುವ ಕಣ್ಕಟ್ಟು ಕರಗತ ಮಾಡಿಕೊಂಡಿದ್ದಾರೆ. ರಾಮಾಯಣದ ಹನುಮಂತನಿಗೆ ಆತನ ಶಕ್ತಿಯ ಬಗ್ಗೆ ಸಂಗಡಿಗರು ನೆನಪಿಸಬೇಕಿತ್ತಂತೆ. ಇಡೀ ಸಮಾಜವೇ ಹನುಮನ ವಿಸ್ಮೃತಿಯನ್ನು ಮೈಗೂಡಿಸಿಕೊಂಡಿರುವಾಗ ಎಚ್ಚರಿಸುವವರು ಯಾರು?




■ ರಘುನಾಥ ಚ.ಹ.